# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** :: **1311**

**ಸದಸ್ಯರ ಹೆಸರು** :: **ಶ್ರೀ. ಐವನ್ ಡಿ' ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು)**

**ಉತ್ತರಿಸಬೇಕಾದ ದಿನಾಂಕ** :: **19-03-2025**

**ಉತ್ತರಿಸಬೇಕಾದ ಸಚಿವರು** :: **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪಶುಸಂಗೋಪನೆ ಇಲಾಖೆಯಿಂದ ಪ್ರಾರಂಭಿಸಲು ಉದ್ದೇಶಿಸಿದ ಪಶುವೈದ್ಯಕೀಯ ಕಾಲೇಜು ಸ್ಥಾಪಿಸುವ ಯೋಜನೆ ಯಾವ ಹಂತದಲ್ಲಿದೆ; ಈ ಯೋಜನೆ ಯಾವ ಕಾಲಮಿತಿಯೊಳಗೆ ಪ್ರಾರಂಭಗೊಳ್ಳುವುದು; ಇದಕ್ಕೆ ತಗುಲಿದ ವೆಚ್ಚ ಎಷ್ಟು; (ವಿವರ ನೀಡುವುದು) | ಪುತ್ತೂರು ವಿಧಾನ ಸಭಾ ಕ್ಷೇತ್ರದ ಈಗಿನ ಕಡಬ ವಿಧಾನ ಸಭಾ ಕ್ಷೇತ್ರದ ಕೊಯಿಲಾದಲ್ಲಿ ಉದ್ದೇಶಿತ ಪಶುವೈದ್ಯಕೀಯ ಕಾಲೇಜಿಗೆ ಮೊದಲ ಹಂತದಲ್ಲಿ ರೂ. 135.00 ಕೋಟಿಗಳ ಅನುದಾನ ಬಿಡುಗಡೆಯಾಗಿದ್ದು ಕರ್ನಾಟಕ ಗೃಹ ಮಂಡಳಿ ವತಿಯಿಂದ ಕಾಲೇಜಿನ ಮುಖ್ಯ ಕಟ್ಟಡ, ಪಶು ಆಸ್ಪತ್ರೆ ಮತ್ತು ಚಿಕಿತ್ಸಾ ಸಂಕೀರ್ಣ, ವಿದ್ಯಾರ್ಥಿಗಳ ವಸತಿ ನಿಲಯ, ವಿದ್ಯಾರ್ಥಿನಿಯರ ವಸತಿ ನಿಲಯ ಹಾಗೂ ಅತಿಥಿ ಗೃಹ ಕಟ್ಟಡ ಕಾಮಗಾರಿಗಳು ಮುಗಿದಿದ್ದು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರಿಗೆ ಹಸ್ತಾಂತರವಾಗಿದೆ. ಕಾಲೇಜು ಪ್ರಾರಂಭ ಮಾಡಲು ಎರಡನೇ ಹಂತದ ಕಾಮಗಾರಿಗೆ ರೂ. 163.75 ಕೋಟಿಗಳು ಎರಡು ಭಾಗವಾಗಿ ರೂ. 99.30 ಕೋಟಿ ಹಾಗೂ ರೂ. 64.45 ಕೋಟಿಗಳ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಭಾರತೀಯ ಪಶುವೈದ್ಯಕೀಯ ಪರಿಷತ್ತಿನ ನಿಯಮಾವಳಿಯಂತೆ ಮೂಲಭೂತ ಸೌಕರ್ಯ ಹಾಗೂ ಅಗತ್ಯವಿರುವ ಬೋದಕ ಮತ್ತು ಬೋಧಕೇತರ ಹುದ್ದೆಗಳು ಭರ್ತಿಯಾದ ನಂತರ ಭಾರತೀಯ ಪಶುವೈದ್ಯಕೀಯ ಪರಿಷತ್ತು ನವದೆಹಲಿಯ ಪರೀವಿಕ್ಷಣ ತಂಡ ಬೇಟಿ ನೀಡಿ ಅನುಮತಿ ನೀಡಿದ ನಂತರ ಕಾಲೇಜು ಪ್ರಾರಂಭಿಸಲಾಗುವುದು. |
| ಆ) | ಪುತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಪಶುವೈದ್ಯಕೀಯ ಕಾಲೇಜು/ ವಿಶ್ವವಿದ್ಯಾನಿಲಯ ಪ್ರಾರಂಭಿಸಬೇಕೆಂಬ ಬೇಡಿಕೆಯನ್ನು ಇಲಾಖೆ ಕಾರ್ಯಗತಗೊಳಿಸುವುದೇ: (ವಿವರ ನೀಡುವುದು) | ಪುತ್ತೂರು/ಕಡಬಾ ವಿಧಾನ ಸಭಾ ಕ್ಷೇತ್ರದಲ್ಲಿ ಪಶುವೈದ್ಯಕೀಯ ಕಾಲೇಜು ಪ್ರಾರಂಭಿಸಬೇಕೆಂಬ ಬೇಡಿಕೆಯನ್ನು ಕಾರ್ಯಗತಗೊಳಿಸಲಾಗುವುದು. |

ಇ) ಮಂಗಳೂರು ನಗರದಲ್ಲಿ ಇರುವ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ವೈದ್ಯರುಗಳ ಕೊರತೆ ಇರುವುದೆಂದು ವರದಿಗಳು ಪ್ರಕಟವಾಗಿರುವುದು ನಿಜವೇ: ಪ್ರಸ್ತುತ ಇಲ್ಲಿ ಎಷ್ಟು ಆಸ್ಪತ್ರೆ/ಕ್ಲಿನಿಕ್ ಕಾರ್ಯನಿರ್ವಹಿಸುತ್ತಿವೆ; ಇವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು ಹಾಗೂ ಭರ್ತಿ ಮಾಡಲು ಇಲಾಖೆ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ಹೌದು

ಮಂಗಳೂರು ನಗರದಲ್ಲಿ 8 ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ವಿವರ ಈ ಕೆಳಗಿನಂತಿದೆ.

| ಕ್ರ. ಸಂ | ಸಂಸ್ಥೆ | ಸಂಖ್ಯೆ |
|---|---|---|
| 1 | ಪಾಲಿ ಕ್ಲಿನಿಕ್ – (ಮಂಗಳೂರು) | 01 |
| 2 | ಪಶು ಆಸ್ಪತ್ರೆ - (ಮಂಗಳೂರು, ಸೂರತ್ಕಲ್) | 02 |
| 3 | ಪಶು ಚಿಕಿತ್ಸಾಲಯ – (ವಾಮಂಜೂರು, ಬೋಳಾರ) | 02 |
| 4 | ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ – (ಬಜಾಲ್, ಕುಳಾಯಿ) | 02 |
| 5 | ಸಂಚಾರಿ ಪಶು ಚಿಕಿತ್ಸಾಲಯ - (ಮಂಗಳೂರು) | 01 |
| | ಒಟ್ಟು: | 08 |

ಸದರಿ ಪಶುವೈದ್ಯಕೀಯ ಸಂಸ್ಥೆಗಳಲ್ಲಿನ ಹುದ್ದೆಗಳ ವಿವರವನ್ನು ಅನುಬಂದಲ್ಲಿ ಲಗತ್ತಿಸಿದೆ.

ಇಲಾಖೆಯಲ್ಲಿ ಖಾಲಿಯಿರುವ ಪಶುವೈದ್ಯಾಧಿಕಾರಿಗಳನ್ನು ಭರ್ತಿ ಮಾಡಿಕೊಳ್ಳುವ ಸಲುವಾಗಿ ಕರ್ನಾಟಕ ಲೋಕಾ ಸೇವಾ ಆಯೋಗಕ್ಕೆ ಈಗಾಗಲೇ 400 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಿಕೊಡಲು ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದರಿ ನೇಮಕಾತಿಗೆ ಸಂಬಂಧಿಸಿದಂತೆ, ದಿನಾಂಕ:08-04-2025 ರಿಂದ ದಿನಾಂಕ:09-04-2025 ರವರೆಗೆ ಪರೀಕ್ಷೆಗಳನ್ನು ನಡೆಸಲು ತಾತ್ಪೂರ್ವಿಕ ದಿನಾಂಕಗಳನ್ನು ನಿಗದಿಪಡಿಸಲಾಗಿರುತ್ತದೆ.

ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡುವವರೆಗೂ ಗುತ್ತಿಗೆ ಆಧಾರದಲ್ಲಿ 400 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗಿದ್ದು, 360 ಪಶುವೈದ್ಯರು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

7363 ಖಾಯಂ 'ಡಿ' ದರ್ಜೆ ಹುದ್ದೆಗಳು ಮಂಜೂರಾಗಿದ್ದು, 1345 'ಡಿ' ದರ್ಜೆ ಹುದ್ದೆಗಳು ಭರ್ತಿಯಾಗಿದ್ದು, 6018 ಹುದ್ದೆಗಳು ಖಾಲಿ ಇರುತ್ತವೆ.

ಖಾಲಿ ಹುದ್ದೆಗಳಿಗೆದುರಾಗಿ 2669 'ಡಿ' ದರ್ಜೆ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಹೊರ ಸಂಪನ್ಮೂಲ ಸಂಸ್ಥೆಗಳಿಂದ ರಾಜ್ಯದ ವಿವಿಧ ಪಶುವೈದ್ಯ ಸಂಸ್ಥೆಗಳಿಗೆ ಈಗಾಗಲೇ ಸೇವೆಯನ್ನು ಪಡೆಯಲಾಗುತ್ತಿದೆ.

| | | |
|---|---|---|
| | | ಮಂಗಳೂರು ನಗರದಲ್ಲಿ 5 'ಡಿ' ದರ್ಜೆ ನೌಕರರು ಹಾಗೂ 01 ವಾಹನಚಾಲಕರು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.<br><br>700 'ಡಿ' ದರ್ಜೆ ನೌಕರರನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ.<br><br>ಇಲಾಖೆಯಲ್ಲಿ ಪಶುವೈದ್ಯರು ಹಾಗೂ ಇತರೆ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವಾಗ ಆದ್ಯತೆಯ ಮೇರೆಗೆ ಮಂಗಳೂರು ನಗರದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಪರಿಶೀಲಿಸಲಾಗುವುದು ಹಾಗೂ ಆದ್ಯತೆ ಮತ್ತು ಅವಶ್ಯಕತೆಗನುಗುಣವಾಗಿ ಭರ್ತಿಗೆ ಕ್ರಮವಹಿಸಲಾಗುವುದು. |

**ಸಂಖ್ಯೆ:ಪಸಂಮೀ 79 ಪಅಸೇ 2025**

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

# ಅನುಬಂದ (LCQ-1311)

## ಮಂಗಳೂರು ನಗರ ವ್ಯಾಪ್ತಿಯಲ್ಲಿ ಬರುವ ವಿವಿಧ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಅಧಿಕಾರಿ/ಸಿಬ್ಬಂದಿ ವಿವರ

| ಕ್ರ. ಸಂ | ಸಂಸ್ಥೆಯ ಹೆಸರು | ಉಪನಿರ್ದೇಶಕರು | | | ಮುಖ್ಯ /ಹಿರಿಯ/ ಪಶುವೈದ್ಯಾಧಿಕಾರಿ | | | ಸಹತಾಂತ್ರಿಕ ಸಿಬ್ಬಂದಿ | | | ಲಿಪಿಕ ಸಿಬ್ಬಂದಿ | | | ವಾಹನ ಚಾಲಕ | | | ಡಿ ದರ್ಜೆ | | | ಒಟ್ಟು | | |
|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ | ಮಂ | ಭರ್ತಿ | ಖಾಲಿ |
| 1 | ಜಿಲ್ಲಾ ಪಾಲಿಕ್ಲಿನಿಕ್, ಮಂಗಳೂರು | 1 | 1 | 0 | 3 | 1 | 2 | 2 | 0 | 2 | 1 | 1 | 0 | 1 | 0 | 1 | 4 | 0 | 4 | 12 | 3 | 9 |
| 2 | ಪಶು ಆಸ್ಪತ್ರೆ, ಮಂಗಳೂರು | 0 | 0 | 0 | 1 | 0 | 1 | 3 | 1 | 2 | 1 | 1 | 0 | 0 | 0 | 0 | 2 | 0 | 2 | 9 | 2 | 7 |
| 3 | ಪಶು ಆಸ್ಪತ್ರೆ ಸುರತ್ಕಲ್ | 0 | 0 | 0 | 1 | 1 | 0 | 1 | 0 | 1 | 0 | 0 | 0 | 0 | 0 | 0 | 2 | 0 | 2 | 4 | 1 | 3 |
| 4 | ನಗರ ಪಶುಚಿಕಿತ್ಸಾಲಯ ವಾಮಂಜೂರು | 0 | 0 | 0 | 1 | 0 | 1 | 1 | 0 | 1 | 0 | 0 | 0 | 0 | 0 | 0 | 2 | 0 | 2 | 4 | 0 | 4 |
| 5 | ನಗರ ಪಶುಚಿಕಿತ್ಸಾಲಯ ಬೋಳಾರ | 0 | 0 | 0 | 1 | 1 | 0 | 1 | 0 | 1 | 0 | 0 | 0 | 0 | 0 | 0 | 2 | 0 | 2 | 4 | 1 | 3 |
| 6 | ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಬಜಾಲ್ | 0 | 0 | 0 | 0 | 0 | 0 | 2 | 0 | 2 | 0 | 0 | 0 | 0 | 0 | 0 | 1 | 0 | 1 | 3 | 0 | 3 |
| 7 | ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಕುಳಾಯಿ | 0 | 0 | 0 | 0 | 0 | 0 | 2 | 0 | 2 | 0 | 0 | 0 | 0 | 0 | 0 | 1 | 0 | 1 | 3 | 0 | 3 |
| 8 | ಸಂಚಾರಿ ಪಶು ಚಿಕಿತ್ಸಾಲಯ, ಮಂಗಳೂರು | 0 | 0 | 0 | 1 | 0 | 1 | 0 | 0 | 0 | 0 | 0 | 0 | 1 | 0 | 1 | 0 | 0 | 0 | 2 | 0 | 2 |
| | ಒಟ್ಟು | 1 | 1 | 0 | 8 | 3 | 5 | 12 | 1 | 11 | 2 | 2 | 0 | 2 | 0 | 2 | 14 | 0 | 12 | 41 | 7 | 34 |

ನಿರ್ದೇಶಕರು